ಓ.ಎಸ್.ನಂ.12/2017

ದಿನಾಂಕಃ 29-06-2019 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

ಪಿ.ಡಬ್ಲ್ಯು:1

**<u>ಪಾಟೀ ಸವಾಲುಃ ಶ್ರೀ ಡಿ ಎನ್ ಪಿ ವಕೀಲರಿಂದಃ-</u>**

ನಾನು ದಾವಾ ಆಸ್ತಿಯನ್ನು ದಿಃ 20-05-1980 ರಲ್ಲಿ ಕ್ರಯಕ್ಕೆ ಪಡೆದಿರುತ್ತೇನೆ. ನಾನು ನಿಪಿ-8 ದಾವಾ ಆಸ್ತಿಯನ್ನು ಕ್ರಯಕ್ಕೆ ಪಡೆದುಕೊಂಡು ಕ್ರಯಪತ್ರ ವಾಗಿರುತ್ತದೆ. ನಾನು ದಾವಾ ಆಸ್ತಿಯನ್ನು ಆನಂದಪ್ಪ ಬಿನ್ ಗವಿರಂಗಪ್ಪ ರವರಿಂದ ಖರೀದಿಸಿರುತ್ತೇನೆ. ದಾವಾ ಆಸ್ತಿಯು ನಾನು ತೆಗೆದುಕೊಂಡಾಗ ಉತ್ತರ -ದಕ್ಷಿಣ 54 ಅಡಿಗಳು ಮತ್ತು ಪೂರ್ವ -ಪಶ್ಚಿಮ 45 ಅಡಿ ವಿಸ್ತೀರ್ಣ ಇರುತ್ತದೆ. ನಿಪಿ-8 ಕ್ರಯಪತ್ರದಲ್ಲಿ ಪೂರ್ವ- ಪಶ್ಚಿಮ 14 ಗಜ ಮತ್ತು ಉತ್ತರ -ದಕ್ಷಿಣ 18 ಗಜ ಇರುತ್ತದೆ. ನಿಪಿ-8 ಕ್ರಯಪತ್ರದಲ್ಲಿ ಪೂರ್ವ -ಪಶ್ಚಿಮ 18 ಗಜ ಮತ್ತು ಉತ್ತರ ದಕ್ಷಿಣ 14 ಗಜು ಅಂತ ಬರೆದಿರುತ್ತದೆ ಎಂದರೆ ಸಾಕ್ಷಿಯು ಹೇಳುವುದೇನೆಂದರೆ ಅದನ್ನು ತಪ್ಪಾಗಿ ಬರೆದಿರುತ್ತಾರೆ ಎಂದು ಹೇಳುತ್ತಾರೆ. ನನಗೆ ಸದರಿ ತಪ್ಪು ನನಗೆ 1984 ರಲ್ಲಿ ಗೊತ್ತಾಯಿತು. ಸದರಿ ತಿದ್ದುಪಡಿಯನ್ನು ಮಾಡಲು ನಿಮಗೆ ಯಾವುದಾದರೂ ತೊಂದರೆ ಇತ್ತ ಎಂಬ ಪ್ರಶ್ನೆಗೆ ಸಾಕ್ಷಿಯು ಹೇಳುವುದೇನೆಂದರೆ ನಮಗೆ ದಾವಾ ಆಸ್ತಿಯನ್ನು ಕೊಟ್ಟ ವ್ಯಕ್ತಿಯು ಮೃತ ಪಟ್ಟಿರುತ್ತಾನೆ ಅವನ ವಾರಸುಧಾರರು ಯಾರು ಇರುವುದಿಲ್ಲ ಎಂದು ಹೇಳುತ್ತಾರೆ . ಆ ಬಗ್ಗೆ ನಾನು ಯಾವುದೇ ದಾಖ್ಲಲೆಗಳನ್ನು ಹಾಜರುಪಡಿಸಿರುವುದಿಲ್ಲ

ನಾನು ದಾವಾ ಆಸ್ತಿಯನ್ನು ಖರೀದಿಸಿದಾಗ ಅದರ ಅಸೆಸ್ಮೆಂಟ್ ನಂ. 424/1 ಎ ಅಂತ ಇತ್ತು . ಅಸೆಸ್ಮೆಂಟ್ ನಂ. 37 ಅದು ಈಗ ಸಂಬಂಧ ಇಲ್ಲ ನಾನು ಕ್ರಯಕ್ಕೆ ತೆಗೆದುಕೊಳ್ಳುವ ಸಮಯದಲ್ಲಿ ಸಂಬಂಧ ಇತ್ತು. ನಾನು ಕ್ರಯಕ್ಕೆ ತೆಗೆದುಕೊಳ್ಳುವ ಸಮಯದಲ್ಲಿಯ ಅಸೆಸ್ಮೆಂಟ್ ನಂ. 37 ಇದರ ದಾಖಲೆಯನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ. ಒಂದು ವೇಳೆ ಬೇಕಾದರೆ ಹಾಜರುಪಡಿಸುತ್ತೇನೆ. ಅಸೆಸ್ಮೆಂಟ್ ನಂ. 37 ರಲ್ಲಿ ಪೂರ್ವ -ಪಶ್ಚಿಮ 18 ಗಜ ಮತ್ತು ಉತ್ತರ -ದಕ್ಷಿಣ 14 ಗಜ ಎಂದು ಖಾತಾ ಅಸೆಸ್ಮೆಂಟ್ ನಲ್ಲಿ ಬರೆಯಲಾಗಿತ್ತು ಅದೇ ರೀತಿಯಾಗಿ ನಾನು ನಿಪಿ-8 ಕ್ರಯಪತ್ರದಲ್ಲಿ ಬರೆದಿರುತ್ತದೆ ಎಂದರೆ ಸರಿ. ನಿಪಿ- 8 ಕ್ರಯಪತ್ರದ ದಾವಾ ಆಸ್ತಿಯ ಚೆಕ್ಕುಬಂಧಿಯು ಪೂರ್ವಕ್ಕೆ ನನ್ನ ಮನೆಯ ಕಾಂಪೌಂಡು, ಪಶ್ಚಿಮಕ್ಕೆಃ ರಸ್ತೆ ಉತ್ತರಕ್ಕೆಃ ರಶೀದ್ ಸಾಬ್ ರವರ ಮನೆ ದಕ್ಷಿಣಕ್ಕೆಃ ಹನುಮಣ್ಣನವರ ಹುಲ್ಲು ಹಿತ್ತಲು ಇತ್ತು

ಎಂದು ಬರೆಸಿರುತ್ತೇನೆ. ನಿಪಿ-8 ರ ಕ್ರಯಪತ್ರದ ಚಕ್ಕುಬಂಧಿಗಳಲ್ಲಿ ಒಂದೇ ಕಡೆ ಪಶ್ಚಿಮಕ್ಕೆ ರಸ್ತೆ ಇತ್ತು

ಎಂದರೆ ಸರಿ . ನಿಪಿ-8 ಕ್ರಯಪತ್ರದ ಪ್ರಕಾರ ನಾನು ಖರೀದಿಸಿದ ದಿನದಿಂದ ಇಲ್ಲಿಯವರೆಗೆ ದಾವಾ ಆಸ್ತಿಯಲ್ಲಿ ಸ್ವಾಧೀನಾನುಭವದಲ್ಲಿ ಇರುತ್ತೇನೆ. ನಿಪಿ-8 ರಂತೆ ಪಂಚಾಯಿತಿಯಲ್ಲಿ ದಾಖಲೆಯಾಗಿರುವುದಿಲ್ಲ.

**ಮುಂದುವರೆದ ಪಾಟೀ ಸವಾಲಿಗಾಗಿ ಸಮಯಾವಕಾಶ ಕೋರಿದ್ದು ನೀಡಲಾಯಿತು.**

ಮರು ವಿಚಾರಣೆಃ ಇರುವುದಿಲ್ಲ.

**(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)**

ಓ.ಹೇ.ಕೇ.ಸ.ಇ.ಎ.ಒ.

(ಈರಪ್ಪ ಢವಳೇಶ್ವರ್)

**2 ನೇ.ಹೆ.ಪ್ರಃದಃನ್ಯಾಃದಂ.,ರವರು, ಕಡೂರು.**